ರೆಡ್ಡಿಯವರು, ತಮ್ಮ ಮಾತನ್ನು ಸ್ಪಷ್ಟವಾಗಿ ನಿರ್ಭಿಡೆಯಿಂದ ಹೇಳಬೇಕು. ಆದರೆ ಕಡೆಗೂ ಎಲ್ಲ ತರ್ಕದ ಯಾರಿಗೆ ಅಧಿಕಾರವಿರುತ್ತದೋ ಅವರ ತೀರ್ಮಾನವನ್ನು ಅಂತಿಮವೆಂದು ಪರಿಗಣಿಸಿ ಜಾರಿ ಮಾಡಬೇಕು ಎನ್ನುತ್ತಾರೆ. ತೀವ್ರವಾದ ನೈತಿಕ ಪ್ರಶ್ನೆ ಬಂದಾಗ – ಆತ್ಮಸಾಕ್ಷಿಗೆ ಒಪ್ಪದಂತಹ ಸಂದರ್ಭ ಬಂದಾಗ ಮಾತ್ರ ರಾಜೀನಾಮೆ ಒಗೆದು ವಾಕೌಟ್ ಮಾಡಬೇಕೆಂದು ವಾದಿಸುತ್ತಾರೆ. ಆದರೆ ಅರುಣಾರ ವಾದ ಭಿನ್ನ ನೆಲೆಯಲ್ಲಿದೆ. ರೆಡ್ಡಿಯವರು ಬರೇ ಭಿನ್ನಾಭಿಪ್ರಾಯವನ್ನು ಹೇಗೆ ನಿಭಾಯಿಸಬೇಕೆಂದು ಸೂಚಿಸಿದರೆ, ಅರುಣಾ, ಭಿನ್ನಭಿಪ್ರಾಯಕ್ಕೆ ತಾಂತ್ರಿಕ ತರ್ಕದ ಕಾರಣಗಳಲ್ಲದೇ ಭ್ರಷ್ಟಾಚಾರದ ಕಾರಣಗಳು ಸರ್ವೇ ಸಾಮಾನ್ಯವಾಗಿರುವುದರಿಂದ, ವ್ಯವಸ್ಥೆಯೊಳಗೆ ಕೆಲಸ ಮಾಡುವುದು ಕಷ್ಟವೆಂದು ಹೇಳುತ್ತಾರೆ. ಇದೇ ಕಾರಣಕ್ಕಾಗಿ ಅವರು ಚುನಾವಣೆಗೆ ನಿಂತು ರಾಜಕೀಯವಾಗಿ ಸಕ್ರಿಯವಾಗುವುದನ್ನೂ ನಿರಾಕರಿಸುತ್ತಾರೆ. ಹೇಗೆ ಐಎಎಸ್ ಅಧಿಕಾರಿಗಳ ಪಾತ್ರವಿದೆಯೋ, ಹೇಗೆ ರಾಜಕೀಯ ನಾಯಕರ, ಮಂತ್ರಿಗಳ, ಶಾಸಕರ ಪಾತ್ರವಿದೆಯೋ, ಹಾಗೇ ಆಂದೋಲನ ಮಾಡುವವರ, ಸರ್ಕಾರವನ್ನು ಪ್ರಶ್ನಿಸಿ ಜವಾಬ್ದಾರಿಯನ್ನಪೇಕ್ಷಿಸುವ ಕ್ರಾಂತಿಕಾರಿಗಳ ಅವಶ್ಯಕತೆಯೂ ಇದೆ.

ಆಂದೋಲನದಲ್ಲಿ ತೊಡಗಿಕೊಂಡಿರುವವರ ಬಗ್ಗೆ ನಾವುಗಳು ಕಲ್ಪಿಸಿಕೊಂಡಿರುವ ಪಡಿಯಚ್ಚನ್ನು ಮುರಿಯಬೇಕೆಂದು ಅರುಣಾ ವಾದಿಸುತ್ತಾರೆ. ಆಕೆ ದೇವಡುಂಗ್ರಿಯಲ್ಲಿ ಬಡವರ ನಡುವೆ ಇರುವುದಕ್ಕೂ, ದೆಹಲಿಗೆ ಬಂದು ಟಿ.ಎಂ. ಕೃಷ್ಣರ ಸಂಗೀತ ಕಛೇರಿ ಕೇಳುವುದರಲ್ಲೂ, ಪಾಶ್ಚಾತ್ಯ ಸಂಗೀತವನ್ನು ಆಸ್ವಾದಿಸುವುದರಲ್ಲೂ ಯಾವುದೇ ವಿರೋಧಾಭಾಸವಿಲ್ಲ ಎಂದು ಹೇಳುತ್ತಾರೆ. ಹೀಗೆ ಅರುಣಾ, ರಾಜಸ್ಥಾನದ ಬಡತನವನ್ನು ಅನುಭವಿಸಿದರೂ, ರಾಜಸ್ಥಾನದ ಮಹಿಳೆಯಾಗಿ, ತಲೆಯ ಮೇಲೆ ಸೆರಗು ಎಳೆದು ಮುಖ ಮುಚ್ಚಿ ಆ ಸಮಾಜದಲ್ಲಿ ಲೀನವಾಗುವ ರೂಪಾಂತರವನ್ನು ಒಪ್ಪುವುದಿಲ್ಲ. ಸಹಜೀವನ ಮಾಡಿದ ಮಾತ್ರಕ್ಕೆ ನಾವೇ ಅವರಾಗಬೇಕೆಂದೇನೂ ಇಲ್ಲ.

ಮುಗಿಸುವ ಮುನ್ನ ಒಂದು ಗಮ್ಮತ್ತಿನ ಕಥೆ. ಪೋಲಿಸ್ ಠಾಣೆಯಿಂದ ಕರೆ ಬರುತ್ತದೆ. ಅಲ್ಲಿ ಒಬ್ಬ ಯುವಕ ಕಳುವಿನ ಸೈಕಲ್ಲೊಂದನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾಗ ಸಿಕ್ಕಿಬಿದ್ದನೆಂದು, ಅವನ ತಂದೆ ಎಂ.ಕೆ.ಎಸ್.ಎಸ್.ನಲ್ಲಿ ಕೆಲಸ ಮಾಡುತ್ತಿರುವುದರಿಂದ ಅರುಣಾರ ತಂಡದವರನ್ನು ಕರೆಸುತ್ತಾರೆ. ಆ ಹುಡುಗನ ಕಥೆ ಗಮ್ಮತ್ತಿನದ್ದು. ಅವನು ಉದಯಪುರದಿಂದ ದೇವಡುಂಗ್ರಿಗೆ (160 ಕಿಲೋಮೀಟರ್) ಬರಬೇಕೆಂದು ಕೆಲಸ ಮಾಡುತ್ತಿದ್ದ ಮಾಲೀಕನಲ್ಲಿ ಪ್ರಯಾಣಕ್ಕೆ ದುಡ್ಡು ಕೇಳುತ್ತಾನೆ. ಇಲ್ಲವೆಂದಾಗ ಸಿಟ್ಟಿನಲ್ಲಿ, ಅಲ್ಲೇ ಸಿಕ್ಕ ಸೈಕಲ್ಲನ್ನು ಏರಿ ಊರಿಗೆ ಪ್ರಯಾಣ ಬೆಳೆಸುತ್ತಾನೆ. ದಾರಿಯಲ್ಲಿ ಸೈಕಲ್ ಚೈನು ಮುರಿಯುತ್ತದೆ. ಅದನ್ನು ಮರಮ್ಮತ್ತು ಮಾಡಲು ಸಾಧ್ಯವಿಲ್ಲ. ಅದನ್ನು ಅಲ್ಲೇ ಬಿಟ್ಟು ಪಕ್ಕದಲ್ಲಿ ಸಿಕ್ಕಿದ ರೈತನೊಬ್ಬನ ಸೈಕಲ್ಲನ್ನು ತುಳಿಯುತ್ತಾ ಮುಂದಕ್ಕೆ ಹೋಗುತ್ತಾನೆ. ಅದು ಪಂಚರಾಗುತ್ತದೆ. ಪಂಚರಂಗಡಿಯಲ್ಲಿ ಸೈಕಲ್ಲನ್ನು ಬಿಟ್ಟು, ರಿಪೇರಿ ಮಾಡುವಷ್ಟರಲ್ಲಿ 'ಇಲ್ಲೇ ಬರುತ್ತೇನೆ' ಎಂದು ಹೇಳಿ ಮತ್ತೊಂದು ಸೈಕಲ್ಲನ್ನು ತುಳಿಯುತ್ತಾ ಊರಿಗೆ ಬರುತ್ತಾನೆ. ಊರಿನ ಸಮೀಪ ಬಂದಾಗ ಏನೂ ತೋಚದೇ ಸೈಕಲ್ಲನ್ನು ಮಾರಲು ಪ್ರಯತ್ನಿಸಿ ಸಿಕ್ಕಿಬೀಳುತ್ತಾನೆ.

ಒಂದು ರೀತಿಯ ವಿಚಿತ್ರ ದುರಂತ ಕಥೆಯಲ್ಲಿ ಸರಿ-ತಪ್ಪುಗಳು ಯಾವುದೆಂದು – ಅದರ ಪ್ರಚೋದಕಾಂಶಗಳು ಏನೆನ್ನುವ ಪ್ರಶ್ನೆಗಳು ಉದ್ಭವವಾಗುತ್ತವೆ. ತಪ್ಪು-ಶಿಕ್ಷೆಯ ಬೈನರಿ ಬದುಕಿನಿಂದ, ತಪ್ಪೆಸಗಲು ಉಂಟಾದ ಸಂದರ್ಭವನ್ನು ಪರಿಗಣಿಸಿದಾಗ ಜೀವನದ ಸಂಕೀರ್ಣ ರಂಗುಗಳು ನಮಗೆ ಕಾಣಸಿಗುತ್ತವೆ. ಪುಸ್ತಕದುದ್ದಕ್ಕೂ ಅರುಣಾ ತಮ್ಮ ಈ ತುಮುಲ ಮತ್ತು ದ್ವಂದ್ವಗಳನ್ನು ಹಂಚಿಕೊಳ್ಳುತ್ತಾ ಹೋಗುತ್ತಾರೆ. ನಿರಂತರವಾಗಿ ಅರ್ಥದ ಹುಡುಕಾಟದಲ್ಲಿರುವ, ಆಂದೋಲನ ಮತ್ತು ಹೋರಾಟವೇ ಪಯಣದ ಕಾರಣ ಎನ್ನುವ ಭಾವನೆ ನಮಗೆ ಇದರಿಂದ ಸಿಗುತ್ತದೆ. ಒಂದು ಅದ್ಭುತ ಬದುಕನ್ನು ಆಯ್ದು ಜನರಿಗಾಗಿ ಜೀವಿಸಿದ ಈ ಪಯಣದ ಬಗ್ಗೆ ಅರಿಯುವುದರಿಂದ ಉಂಟಾಗುವ ಸಾರ್ಥಕ್ಯವನ್ನು ವಿವರಿಸುವುದು ಕಷ್ಟ.

●